**OS-134/2023** **ಪಿ.ಡಬ್ಲ್ಯೂ-1 (ಹೊಂಬಾಳಮ್ಮ)**

ದಿನಾಂಕಃ **25.02.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಸಿ.ಆರ್.ಎಸ್. ವಕೀಲರಿಂದ :</u>**

ಹಂಪಾಪುರ ನನ್ನ ತವರು ಹಾಗೂ ಗಂಡನ ಊರಾಗಿರುತ್ತದೆ. ನನ್ನ ತಂದೆ ತೀರಿ ಹೋಗುವ ಕಾಲಕ್ಕೆ ನನಗೆ 40 ವರ್ಷ ವಯಸ್ಸಾಗಿತ್ತು. ನಾನೇ ಹೇಳಿ ಕೇಸಿನ ಒಕ್ಕಣೆ ಬರೆಸಿರುತ್ತೇನೆ. ನಿಪಿ-1 ವಂಶವೃಕ್ಷವನ್ನು ಶ್ರೀರಂಗಪಟ್ಟಣದಲ್ಲಿ ನಾನೇ ಬರೆಸಿರುತ್ತೇನೆ. ನಿಪಿ-1 ರಲ್ಲಿರುವ ಎಲ್ಲಾ ಒಕ್ಕಣೆಗಳು ಸರಿಯಿದೆ. ನಿಪಿ-1 ರಲ್ಲಿ ನನ್ನ ಹೆಬ್ಬೆಟ್ಟು ಗುರುತು ಸಹಿಗಳಿಲ್ಲ. ನಿಪಿ-7 ದಾಖಲೆಯನ್ನು ನನಗೆ ದುಡ್ಡಾಗಲೀ ಅಥವಾ ಆಸ್ತಿಯಾಗಲೀ ಕೊಟ್ಟಿಲ್ಲ ಎಂಬುದನ್ನು ತೋರಿಸಲು ಹಾಜರುಪಡಿಸಿದ್ದೇನೆ. ಈ ಕುರಿತು ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುತ್ತೇನೆ. ನಿಪಿ-7 ರ ಒಕ್ಕಣೆಯನ್ನು ತಿಳಿದುಕೊಂಡಿರುತ್ತೇನೆ.

2. ಪ್ರತಿವಾದ ಪತ್ರದಲ್ಲಿ ಏನು ಬರೆಸಿದ್ದಾರೆಂದು ತಿಳಿದುಕೊಂಡಿರುತ್ತೇನೆ. ದಿನಾಂಕ 15.06.1965 ರಲ್ಲಿ 1 ನೇ ಪ್ರತಿವಾದಿಯ ತಂದೆ ಈರೇಗೌಡ ರವರು ದಾವಾಸ್ವತ್ತುಗಳಿಗೆ ಸಂಬಂಧಿಸಿದಂತೆ ನೋಂದಾಯಿತ ವ್ಯವಸ್ಥಾಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಹಳ್ಳಿಸಿದ್ದಯ್ಯರವರು ನನ್ನ ತಾಯಿ ಕಾಳಮ್ಮ ರವರನ್ನು ವಿವಾಹವಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಹಳ್ಳಿಸಿದ್ದಯ್ಯರವರು ಮೂಲತಃ ಹೊಸೂರು ಗ್ರಾಮದವರು ಎಂದರೆ ಸರಿಯಲ್ಲ. ನಾನು ಹುಟ್ಟಿದ ನಂತರ ನನ್ನ ತಂದೆ ಹಳ್ಳಿಸಿದ್ದಯ್ಯರವರು ತೀರಿಕೊಂಡರು ಎಂದರೆ ಸರಿಯಲ್ಲ. ನಂತರ ನನ್ನ ತಾಯಿ ಕಾಳಮ್ಮರವರು 1 ನೇ ಪ್ರತಿವಾದಿಯ ತಂದೆ ಈರೇಗೌಡರವರೊಂದಿಗೆ ಕೂಡಾವಳಿಯನ್ನು ಮಾಡಿಕೊಂಡಿರುತ್ತಾರೆ. (ಕೂಡಾವಳಿ ಎಂದರೆ ಏನು ಎಂದು ನ್ಯಾಯಾಲಯವು ಪ್ರಶ್ನಿಸಿದಾಗ ವಕೀಲರು ಅದರರ್ಥ ವಿಧವಾ ವಿವಾಹ ಎಂದು ತಿಳಿಸಿರುತ್ತಾರೆ.)

3. 2 ನೇ ವಿವಾಹವಾದ ನಂತರ 1 ನೇ ಪ್ರತಿವಾದಿಗೆ ನನ್ನ ತಾಯಿ ಕಾಳಮ್ಮರವರು ಜನ್ಮ ನೀಡಿರುತ್ತಾರೆ ಎಂದರೆ ಸಾಕ್ಷಿ ನಾವಿಬ್ಬರೂ ಈರೇಗೌಡರ ಮಕ್ಕಳು ಎಂದು ನುಡಿಯುತ್ತಾರೆ. ನನ್ನ ಹಾಗೂ 1 ನೇ ಪ್ರತಿವಾದಿಯ ತಂದೆ ಬೇರೆ ಬೇರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಈರೇಗೌಡರು 1965 ರಲ್ಲಿ ಕಾಳಮ್ಮ ರವರನ್ನು ಸಂರಕ್ಷಕರಾಗಿ 1 ನೇ ಪ್ರತಿವಾದಿಯ ಪರವಾಗಿ ವ್ಯವಸ್ಥಾಪತ್ರವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎಲ್ಲಾ ವಿಚಾರಗಳೂ ನನ್ನ ತಿಳಿವಳಿಕೆಯಲ್ಲಿದ್ದರೂ ಸಹ ಹೇಗಾದರೂ ಆಸ್ತಿಯನ್ನು ಲಪಟಾಯಿಸುವ ದುರುದ್ದೇಶದಿಂದ ನಿಪಿ-1 ವಂಶವೃಕ್ಷವನ್ನು ಸೃಷ್ಟಿಸಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಪೂರಕ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವ್ಯವಸ್ಥಾಪತ್ರದ ಮೇರೆಗೆ 1 ನೇ ಪ್ರತಿವಾದಿ ದಾವಾಸ್ವತ್ತಿನ ಸಂಪೂರ್ಣ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**1 ನೇ ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**